**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 02-07-2026:**

**ಮುಂದುವರೆದ ಪಾಟೀಸವಾಲುಃ ಆರೋಪಿ ಪರ ಶ್ರೀ ಡಿ ಎಂ ಪಿ ವಕೀಲರಿಂದಃ**

64. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಆರೋಪಿತರ ಮನೆಯಲ್ಲಿ ಶೋಧನ ಮಾಡುವಾಗ ಮಧುರವರಿಗೆ ಸಿಕ್ಕಿದ ರಶೀದಿ ಯಾವುದಕ್ಕೂ ತಾಳೆಯಾಗುತ್ತಿರಲಿಲ್ಲ ಆದ್ದರಿಂದ ಅದನ್ನು ಪರಿಗಣನೆಗೆ ಮಾಡಿರುವುದಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿ. ಆದರೆ ಅದು ನಿಪಿ.15ರ ಪುಟ 12ರಲ್ಲಿ ಕ್ರ.ಸಂ.3, 29 ಮತ್ತು 31ಕ್ಕೆ ಸಂಬಂಧಿಸಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ಅದು ತಾಳೆಯಾಗುತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

65. ಆರೋಪಿತರ ಮನೆಯನ್ನು ಶೋಧನೆ ಮಾಡಿದಾಗ ವೆಂಕಟೇಗೌಡರವರ ಹೆಸರಿನಲ್ಲಿರುವ ಭಾರತ್ ಗ್ಯಾಸ್ ವೋಚರ್ ಬಿಲ್ ಸಿಕ್ಕಿದೆ ಎಂದು ನಿಪಿ.15ರ ಪುಟ ಸಂ.10ರ ಕ್ರ.ಸಂ.19ರಲ್ಲಿ ಕಾಣಿಸಿದ್ದೇನೆ ಎಂದರೆ ಸರಿ. ನನ್ನ ಅಂತಿಮ ವರದಿಯ ಪುಟ 26ರ ಕ್ರ.ಸಂ.19ರಲ್ಲಿ ಆರೋಪಿತರು ಇದನ್ನು ತಮ್ಮ ಅನುಬಂದದಲ್ಲಿ ಸದರಿ ವೆಂಕಟೇಗೌಡ ತಮ್ಮ ಚಿಕ್ಕಪ್ಪನಾಗಿದ್ದು ಅವರು ಅಮೇರಿಕಕ್ಕೆ ಹೋಗುವಾಗ ಸಿಲಿಂಡರ್ ಮತ್ತು ಪುಸ್ತಕವನ್ನು ತಮ್ಮ ಮನೆಯಲ್ಲಿ ಇಟ್ಟು ಹೋಗಿರುತ್ತಾರೆ. ಅದನ್ನು ತಾನು ಉಪಯೋಗಿಸಿಕೊಂಡಿರುವುದಿಲ್ಲವೆಂದು ಘೋಷಿಸಿಕೊಂಡಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ನಿಜ. ವೆಂಕಟೇಗೌಡರವರು ಅಮೇರಿಕಕ್ಕೆ ಹೋಗಿದ್ದಾರೆ ಎಂಬ ಬಗ್ಗೆ ಅನುಬಂದದಲ್ಲಿ ಅವರಿಗೆ ಸಂಬಂಧಪಟ್ಟ ವಿಸಾ, ಪಾಸ್ ಪೋರ್ಟ್ ಮತ್ತು ವಿಮಾನ ಪ್ರಯಾಣ ಟಿಕೇಟ್ ಇತ್ಯಾದಿ ದಾಖಲೆಗಳ ಪ್ರತಿಗಳನ್ನು ನಿಪಿ.169ರ ಪುಟ ಸಂ.276 ರಿಂದ 280ರವರಿಗೆ ಹಾಜರುಪಡಿಸಿದ್ದಾರೆ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತಾರೆ ಆದರೆ ಅದರಲ್ಲಿ ಯಾವ ವರ್ಷ ಎಂದು ಇಲ್ಲ ಎನ್ನುತ್ತಾರೆ. ಮುಂದುವರೆದು ಮೂಲ ದಾಖಲೆಯನ್ನು ಹಾಜರುಪಡಿಸದೆ ಇರುವುದರಿಂದ ತಾಳೆ ಮಾಡಲು ಆಗಲಿಲ್ಲ ಎನ್ನುತ್ತಾರೆ. ಅದರ ಮೂಲ ದಾಖಲೆಗಳನ್ನು ಹಾಜರುಪಡಿಸುವಂತೆ ನಾನು ಆರೋಪಿತರಿಗಾಗಲಿ, ವೆಂಕಟೇಗೌಡರಿಗಾಗಲಿ ನೋಟೀಸು ಕೊಡಲಿಲ್ಲ. ಪಾಸ್ ಪೋರ್ಟ್ ಕಛೇರಿಯಿಂದಲೂ ನಾನು ಈ ಬಗ್ಗೆ ಖಚಿತಪಡಿಸಿಕೊಂಡಿಲ್ಲ. ಅಂತಿಮ ವರದಿಯಲ್ಲಿ ನಾನು ಅವುಗಳ ಮೂಲ ದಾಖಲೆಗಳನ್ನು ಹಾಜರುಪಡಿಸದೆ ಇದ್ದುದ್ದರಿಂದ ಅದನ್ನು ಕೈ ಬಿಟ್ಟಿರುತ್ತೇನೆ ಎಂದು ಹೇಳಿಲ್ಲ. ನಿಪಿ.15ರ ಪುಟ 12ರಲ್ಲಿ ಕ್ರ.ಸಂ.1 ರಿಂದ 38ರಲ್ಲಿ ಕಾಣಿಸಿದ ಚಿನ್ನಾಭರಣಗಳಲ್ಲಿ ವೆಂಕಟೇಗೌಡರವರ ಮಗಳು ಮಧುರವರಿಗೆ ಸೇರಿದ ಚಿನ್ನದ ಒಡವೆಗಳು ಸೇರಿದೆ ಎಂದು ಆರೋಪಿತರು ನಿಪಿ.167(1)ರಲ್ಲಿ ಘೋಷಿಸಿಕೊಂಡಿದ್ದಾರೆ ಹಾಗೂ ಅದನ್ನು ಅವರ ಆಸ್ತಿಯ ಲಕ್ಕಕ್ಕೆ ತೆಗೆದುಕೊಳ್ಳಬಾರದು

ಎಂದು ಕೇಳಿಕೊಂಡಿದ್ದರು ಎಂದರೆ ಸರಿ. ಆದರೂ ಅದನ್ನು ನಾನು ಅವರ ಆಸ್ತಿಯ ಲೆಕ್ಕಕ್ಕೆ ಪರಿಗಣಿಸಿದ್ದೇನೆ ಎಂದರೆ ಸಾಕ್ಷಿಯು ಅದಕ್ಕೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರಲಿಲ್ಲ ಎನ್ನುತ್ತಾರೆ. ಸದರಿ ವೆಂಕಟೇಗೌಡ ಮತ್ತು ಮಧುರವರನ್ನು ನಾನು ವಿಚಾರಿಸಿ ಹೇಳಿಕೆ ಮಾಡಿಕೊಂಡಿಲ್ಲ.

66. ಆರೋಪಿತರು ನಿಪಿ.167ರ ಅನುಬಂದ -12ಎ ಯಲ್ಲಿ ತನ್ನ ಪತ್ನಿಗೆ ಅವರ ತಂದೆ ರೂ.575000ಲಕ್ಷ ಗಳನ್ನು ನಗದಾಗಿ ಮನೆ ಕಟ್ಟುವ ಸಂದರ್ಭದಲ್ಲಿ ಕೊಟ್ಟಿರುತ್ತಾರೆ ಎಂದು ಘೋಷಿಸಿಕೊಂಡಿರುತ್ತಾರೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಆಸ್ತಿ ದಾಯಿತ್ವ ದಾಖಲೆಯಲ್ಲಿ ಅದನ್ನು ಘೋಷಿಸಿಕೊಂಡಿಲ್ಲ ಮತ್ತು ಪೂರಕ ದಾಖಲೆಗಳನ್ನು ಹಾಜರುಪಡಿಸಿಲ್ಲ ಎನ್ನುತ್ತಾರೆ. ಹಣವನ್ನು ಕೊಟ್ಟಿದ್ದಾರಾ ಇಲ್ಲವಾ ಎಂದು ಆರೋಪಿತರ ತಂದೆಯನ್ನು ವಿಚಾರಣೆ ಮಾಡಿಲ್ಲ. ಆರೋಪಿತರ ಮಾವನವರು ತಮಗೆ ಸೇರಿದ ನಿವೇಶವನ್ನು ಮಾರಿ ಬಂದ ಹಣವನ್ನು ಡ್ರಾ ಮಾಡಿ ಆರೋಪಿತರ ಪತ್ನಿಗೆ ಕೊಟ್ಟ ಬಗ್ಗೆ ಆರೋಪಿತರು ಅದಕ್ಕೆ ಸಂಬಂಧಪಟ್ಟ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ನಿಪಿ.169ರ ಪುಟ 150(ಕೆ)ರಲ್ಲಿ ದಾಖಲೆಯನ್ನು ಹಾಜರುಪಡಿಸಿರುತ್ತಾರೆ ಎಂದರೆ ಸಾಕ್ಷಿಯು ಅದು ಆರೋಪಿತರ ಮಾವನವರು ಹಣವನ್ನು ಡ್ರಾ ಮಾಡಿದ ಬಗ್ಗೆ ಕಂಡುಬರುತ್ತದೆ. ಆದರೆ ಆರೋಪಿತರ ಪತ್ನಿಗೆ ಕೊಟ್ಟಿದ್ದಾರೆ ಎನ್ನುವ ಬಗ್ಗೆ ಯಾವುದೇ ದಾಖಲೆ ಇಲ್ಲ ಎನ್ನುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ನಿಪಿ.169ರ ಪುಟ 150 ಮತ್ತು 150(ಎ)ಯಲ್ಲಿ ಆರೋಪಿತರು ಅವರ ಮಾವನವರ ಘೋಷಣಾ ಪ್ರಮಾಣಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಹೌದು ಆದರೆ ಆ ದಾಖಲೆಗಳು ದಾಳಿ ನಡೆದ ನಂತರ ದಿನಾಂಕದ್ದು ಎನ್ನುತ್ತಾರೆ. ಆ ರೂ.575000ಲಕ್ಷ ಹಣ ಆರೋಪಿತರ ಪತ್ನಿಗೆ ಅವರ ತಂದೆ ಕೊಟ್ಟದ್ದು ಎನ್ನುವ ಬಗ್ಗೆ ಖಚಿತ ಆಗಿದ್ದರೂ ಕೂಡ ನಾನು ಆರೋಪಿತರ ಆದಾಯವನ್ನು ಕಡಿಮೆ ತೋರಿಸುವ ಸಲುವಾಗಿ ಅದಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡದೆ ಅದನ್ನು ಪರಿಗಣಿಸಿರುವುದಿಲ್ಲ ಎಂದರೆ ಸರಿಯಲ್ಲ.

67. ನಾನು ಆದಾಯದ ವಿವರದೊಂದಿಗೆ ಸಲ್ಲಿಸಿದ ದಾಖಲೆಗಳಲ್ಲಿ ದಿಃ 10.11.12ರ ಸಾಲ ಪಡೆದಿರುವ ಬಗ್ಗೆ ಒಪ್ಪಿಗೆ ಪತ್ರ ಎಂಬ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿಯು ಅದನ್ನು ಆರೋಪಿತರೇ ನೀಡಿದ್ದು ಎನ್ನುತ್ತಾರೆ. ಈ ದಾಖಲೆಯಂತೆ ಆರೋಪಿತರು ಮತ್ತು ಡಾ.ಮೋಹನ್ ಎಂಬುವವರ ನಡುವೆ ರೂ.19,90,000 ಸಾಲದ ವ್ಯವಹಾರ ನಡೆಯಿತು ಎಂದು ನನಗೆ ಈ ಮತ್ತು ಇತರೆ ದಾಖಲೆಗಳನ್ನು ಪರಿಶೀಲಿಸಿದಾಗ ಕಂಡುಬಂದಿದ್ದರೂ ಕೂಡ ಅದನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿಲ್ಲ ಎಂದರೆ ಸಾಕ್ಷಿಯು ಅದನ್ನು ಎಪಿಆರ್. ನಲ್ಲಿ ಘೋಷಿಸಿಕೊಂಡಿಲ್ಲ ಹಾಗೂ ಆ ದಾಖಲೆ

ನೊಂದಾಯಿತವಲ್ಲದ ದಾಖಲೆ ಎನ್ನುತ್ತಾರೆ.

68. ಆರೋಪಿತರು ಹಾಜರುಪಡಿಸಿದ ಎಲ್ಲಾ ದಾಖಲೆಗಳ ಪ್ರಕಾರ ಅವರ ಚೆಕ್ ಅವರಧಿಯ ಆದಾಯ ರೂ.1,52,80,930/- ಎಂದರೆ ಸರಿಯಲ್ಲ. ಅದೇ ರೀತಿ ಅವರ ಆಸ್ತಿ ರೂ.80,04,326/- ಆಗಿತ್ತು ಎಂದರೆ ಸರಿಯಲ್ಲ. ಹಾಗೆಯೇ ಚೆಕ್ ಅವಧಿಯ ಅವರ ಕೊಟ್ಟಾರ್ರೇ ಖರ್ಚು ರೂ.11,69,438/- ಆಗಿತ್ತು ಎಂದರೆ ಸರಿಯಲ್ಲ. ಅವರ ಆದಾಯ ಆಸ್ತಿಯ ಮೂಲಗಳನ್ನು ನಾನು ದಾಖಲೆ ಮತ್ತು ಮೌಖಿಕ ಸಾಕ್ಷ್ಯಾಧಾರಗಳ ಮೂಲಕ ಕಲೆ ಹಾಕದೆ ಊಹೆಗಳ ಮೇಲೆ ಅವರು ಆದಾಯಕ್ಕಿಂತ ಜಾಸ್ತಿ ಆದಾಯ ಹೊಂದಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಂತಿಮ ವರದಿ ತಯಾರಿಸಿದ ನಂತರ ಆರೋಪಿತರ ಲೆಕ್ಕಚಾರ ಕೇಳಿದ್ದರೆ ಅವರು ಕ್ರಮಬಂಧ್ಧವಾದ ಲೆಕ್ಕಚಾರ ಕೊಡುತ್ತಿದ್ದರು ಆಗ ನಾನು ಅವರ ಮೇಲೆ ಈ ಕೇಸು ಹಾಕಲು ಬರುವುದಿಲ್ಲ ಎಂಬ ಕಾರಣಕೋಸ್ಕರ ಅವರಲ್ಲಿ ಲೆಕ್ಕಚಾರ ಕೇಳಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**